<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>

<u>ಸಿದ್ದಾಪುರ</u>

<u>ಸಿ.ಸಿ. 794 /2023</u>

| | |
|---|---|
| ಸಿ.ಡಬ್ಲ್ಯೂಃ | 10 |
| ಪಿ.ಡಬ್ಲ್ಯೂಃ | 6 |

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಅನೀಲ ಬಿ ಎಂ |
| ತಂದೆ ಹೆಸರು | ಃ | ಬಸಪ್ಪ |
| ವಯಸ್ಸು | ಃ | 35 ವರ್ಷ |
| ವೃತ್ತಿ | ಃ | ಪಿ ಎಸ್ ಐ ಗೋಕರ್ಣ ಪೋಲೀಸ ಠಾಣೆ |
| ವಾಸ | ಃ | ಗೋಕರ್ಣ |

**<u>ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 25–06–2026</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ</u>**

ನಾನು ಜುಲೈ -2023 ರಿಂದ ಜುಲೈ -2025 ರ ವರೆಗೆ ಸಿದ್ದಾಪುರ ಪೋಲೀಸ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 20-08-2023 ರಂದು ಈ ಪ್ರಕರಣದ ಕಡತವನ್ನು ಚಾಸಾ-9 ರವರಿಂದ ಪಡೆದುಕೊಂಡು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ನಂತರ ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ನೋಟೀಸ್ ನೀಡಿ ಪಂಚರಾಗಿ ಸಹಕರಿಸಬೇಕು ಎಂದುಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿದ್ದು, ನಂತರ ಚಾಸಾ-1 ರವರು ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಬೆಳಿಗ್ಗೆ 11-30 ಗಂಟೆಯಿಂದ 12-30 ಗಂಟೆ ವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ.

ಸಾಕ್ಷಿಗೆ ಈಗ ಪಂಚರರಿಗೆ ನೀಡಿದ ನೋಟೀಸನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.11 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲದಲ್ಲಿ ಪಿರ್ಯಾದುದಾರರು ಒಂದು ಛತ್ರಿ , ನೀಲಿ ಬಣ್ಣದ ಪೂರ್ಣ ತೋಳಿನ ಶರ್ಟ ಹಾಗೂ ಒಂದು ಬಿಳಿ ಬಣ್ಣದ ಬನಿಯನ್ ನ್ನು ನನ್ನ ಸಮಕ್ಷಮ ಹಾಜರುಪಡಿಸಿದ್ದು ಅದನ್ನು ವಶಪಡಿಸಿಕೊಂಡಿರುತ್ತೇನೆ. ಅದರ ಜೊತೆಗೆ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ ಅದರ ಪೋಟೊವನ್ನು ಸಹ ತೆಗೆದುಕೊಂಡಿರುತ್ತೇನೆ.

ಸಾಕ್ಷಿಗೆ ಈಗ ಕಚ್ಚಾ ನಕಾಶೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನಾಲ್ಕು ಪೋಟೊಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿ.ಪಿ-4 ರಿಂದ 7 ಎಂದು ಗುರುತಿಸಲಾಗಿರುತ್ತದೆ.

ಸಾಕ್ಷಿಗೆ ಈಗ ಮುದ್ದೆಮಾಲುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

ನಂತರ ವಾಪಸ್ ಠಾಣೆಗೆ ಬಂದು ವಶಪಡಿಸಿಕೊಂಡ ವಸ್ತುಗಳಿಗೆ ಸಂಬಂದಿಸಿದಂತೆ ಸ್ವತ್ತು ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿಗೆ ಈಗ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.12 ಮತ್ತು 13 ಎಂದು, ಅವುಗಳಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಮತ್ತು ನಿಪಿ-13(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾಸಾ-7 ರವರಿಂದ ಭಾ. ಸಾ. ಅಧಿನಿಯಮ 65(ಬಿ) ನಂತೆ ಪ್ರಮಾಣ ಪತ್ರವನ್ನು ನನ್ನ ಸಮಕ್ಷಮ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.



ಸಾಕ್ಷಿಗೆ ಈಗ ಸದರಿ ಪ್ರಮಾಣ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.9 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿಯು ನನ್ನ ಸಮಕ್ಷಮ ಠಾಣೆಗೆ ಹಾಜರಾಗಿದ್ದು, ಆತನ ವಿರುದ್ಧ ದಸ್ತಗಿರಿ ಕ್ರಮವನ್ನು ಜರುಗಿಸಿ ಆತನನ್ನು ದಸ್ತಗಿರಿ ಮಾಡಿ ನಂತರ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ನಂತರ ದಿಃ 14-10-2023 ರಂದು ಕೃಷ್ಣ ನಾರಾಯಣ ಹೆಗಡೆ ರವರ ಗಾಯದ ಪ್ರಮಾಣ ಪತ್ರವನ್ನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಈಗ ಸದರಿ ಗಾಯದ ಪ್ರಮಾಣ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.14 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ನಂತರ ಈ ಪ್ರಕರಣದ ತನಿಖೆಯನ್ನು ಪೂರ್ಣ ಗೋಳಿಸಿ ಅದೇ ದಿನ ದಿಃ 14-10-2023 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿದ್ದು, ಸಾಕ್ಷಿಯು ಆರೋಪಿಯನ್ನು ನೋಡಿ ಆ ದಿನ ನಾನು ದಸ್ತಗಿರಿ ಮಾಡಿದ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ವ್ಯಕ್ತಿ ಈತನೆ ಎಂದು ನುಡಿಯುತ್ತಾರೆ .

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

ಸರ್ವೆ ನಂ 34/4 ಕ್ಕೆ ಸಂಬಂದಿಸಿದಂತೆ ಜಗಳ ಆಗಿರುತ್ತದೆ ಎಂದು ದೂರುದಾರರು ತಿಳಿಸಿರುತ್ತಾರೆ. ಸರ್ವೆ ನಂ 34/4 ಯಾರಿಗೆ ಸೇರಿದ್ದು ಎಂದು ನೀವು ತನಿಖೆ ಮಾಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಪಹಣಿ ಪತ್ರಿಕೆಯನ್ನು ತೋರಿಸಿ, ಸರ್ವೆ ನಂ 34/4 ಯಾರ ಹೆಸರಿನಲ್ಲಿ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಮಂಗಳಾ ಕೊಂ ಮಂಜುನಾಥ ರವರ ಹೆಸರಿನಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ.

ಈ ಪ್ರಕರಣವನ್ನು ದಾಖಲು ಮಾಡುವ ಬದಲು ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನಿರ್ದೇಶನೆಗಳನ್ನು ಪಾಲನೆ ಮಾಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ .



ಸರ್ವೆ ನಂ 34/4 ರಲ್ಲಿ ಕಾಯಿಯನ್ನು ಎತ್ತುವ ಸಂದರ್ಭದಲ್ಲಿ ಘಟನೆ ಆಗಿರುತ್ತದೆ ಎಂದು ನನ್ನ ತನಿಖೆ ಕಾಲದಲ್ಲಿ ತಿಳಿದುಬಂದಿರುತ್ತದೆ.

ಸಾಕ್ಷಿಗೆ ಈಗ ನಿ.ಪಿ-12 ರಲ್ಲಿ ಇರುವ ಹೇಳಿಕೆಯ ಭಾಗವನ್ನು ಅಂದರೆ " ಸರ್ವೆ ನಂ 34/4 ರಲ್ಲಿ ತೆಂಗಿನ ಮರದಿಂದ ಮೂರು ತೆಂಗಿನ ಕಾಯಿಗಳು ಉದುರಿ ಬಿದ್ದಿದ್ದವು, ಆ ಮೂರು ತೆಂಗಿನ ಕಾಯಿಗಳನ್ನು ನಾನು ಹೆಕ್ಕಿಕೊಂಡು ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ " ಎಂದು ನಿಮ್ಮ ಸಮಕ್ಷಮ ಹೇಳಿಕೆ ನೀಡಿರುತ್ತಾರೆಯೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನ ತನಿಖೆಯ ಸಮಯದಲ್ಲಿ ಸ್ಥಳ ಪಂಚನಾಮೆ ಸಮಯದಲ್ಲಿ ಮೂರು ತೆಂಗಿನ ಕಾಯಿಗಳನ್ನು ವಶಪಡಿಸಿಕೊಂಡಿರುವುದಿಲ್ಲ.

ಪಂಚರರನ್ನು ಸ್ಥಳಕ್ಕೆ ಬರಮಾಡಿಕೊಂಡು ಅಲ್ಲಿಯೇ ನೋಟೀಸ್ ನೀಡಿರುತ್ತೇನೆ. ಸಾಕ್ಷಿಗೆ ಈಗ ಸಿದ್ದಾಪುರ ಪೋಲೀಸ ಠಾಣೆಯವರು ನೀಡಿರುವ ಒಂದು ಹಿಂಬರಹವನ್ನು ತೋರಿಸಿ, ಅದರಲ್ಲಿ GSC ಸಂಖ್ಯೆ 173 ರಂತೆ ಮಂಗಳಾ ರವರು ಕೃಷ್ಣ ನಾರಾಯಣ ಹೆಗಡೆ , ವೀರಬದ್ರ ಹಾಗೂ ನೇತ್ರಾವತಿ ರವರ ವಿರುದ್ಧ ಅರ್ಜಿ ನೀಡಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಸದರಿ ಕೃಷ್ಣ ನಾರಾಯಣ ಹೆಗಡೆ , ವೀರಬದ್ರ ಹಾಗೂ ನೇತ್ರಾವತಿ ರವರುಗಳು ಸರ್ವೆ ನಂ 34/4 ರ ಸ್ವತ್ತಿನ ತಂಟೆ ತಕರಾರಿಗೆ ಹೋಗುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಪಂಚನಾಮೆ ಮಾಡಿದ ಸ್ಥಳ, ದೂರುದಾರರ ಮನೆಗೆ ಹೋಗುವ ಮಣ್ಣಿನ ರಸ್ತೆ ಇರುತ್ತದೆ. ದೂರುದಾರರ ಮನೆ, ಘಟನಾ ಸ್ಥಳದಿಂದ ಅಂದಾಜು 25-30 ಅಡಿ ಅಂತರ ಇರುತ್ತದೆ. ಇದನ್ನು ನಾನು ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ. ಘಟನಾ ಸ್ಥಳದ ಸುತ್ತಮುತ್ತ ಇರುವ ಸ್ಥಳವು ಅರಣ್ಯ ಪ್ರದೇಶ ವಾಗಿರುತ್ತದೆ ಎಂದರೆ ಸಾಕ್ಷಿಯು ಗಿಡಮರಗಳಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ . ನಿ.ಪಿ-4 ರಲ್ಲಿ ಕಾಣುವ ಮನೆಯು ಆರೋಪಿಗೆ ಸಂಬಂಧಿಸಿದ್ದು ಇರುತ್ತದೆ. ನಿ.ಪಿ-4 ನ್ನು ಸಾಕ್ಷಿಗೆ ತೋರಿಸಿ, ಘಟನೆಯು ಆರೋಪಿ ಮನೆಯ ಕಾಂಪೌಂಡ್ ಗೇಟಿನ ಹೊರಗಡೆ ಆಗಿರುತ್ತದೆಯೆ? ಅಥವಾ ಒಳಗಡೆ ಆಗಿರುತ್ತದಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೋರಗಡೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಿ.ಪಿ-4 ರಲ್ಲಿ ಆರೋಪಿಗೆ ಸೇರಿದ ಕಾಂಪೌಂಡ್ ಒಳಗಡೆ ನೀವು , ದೂರು ದಾರರು ಹಾಗೂ ಪಂಚರರು ನಿಂತುಕೊಂಡು ಪೋಟೊವನ್ನು ತೆಗೆದಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾವು ಪೋಟೊ ತೆಗೆದ ಸ್ಥಳವು ಸಾರ್ವಜನಿಕ ರಸ್ತೆ ಇರುವುದಿಲ್ಲ ಎಂದರೆ ಸರಿ. ಮುದ್ದೆಮಾಲುತರಹದ ವಸ್ತುಗಳು ಹೊರಗಡೆ ಸಾಕಷ್ಟು ಸಿಗುತ್ತವೆ ಎಂದರೆ ಸರಿಯಲ್ಲ.

ಸಿದ್ದಾಪುರ ವಲಯದಲ್ಲಿ ಸಾಕಷ್ಟು ಮಳೆ ಬಿಳುವ ಕಾರಣ ಪ್ರತಿಯೊಬ್ಬರ ಮನೆಯಲ್ಲಿ 3-4 ಛತ್ರಿಗಳು ಇರುತ್ತವೆ ಎಂದರೆ ಸರಿ.

ಪಂಚನಾಮೆ ಮಾಡಿದ ಸ್ಥಳದ ಸುತ್ತಮುತ್ತ ಎಷ್ಟು ಮನೆಗಳು ಇರುತ್ತವೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿಯ ಮನೆ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಪಂಚರರನ್ನು ನಮ್ಮ ಸಿಬ್ಬಂದಿಯವರ ಮೂಲಕ ಬರಮಾಡಿಕೊಂಡಿರುತ್ತೇನೆ. ಪಂಚರರನ್ನು ನಮ್ಮ ಸಿಬ್ಬಂದಿಯವರು ಎಲ್ಲಿಂದ ಕರೆದುಕೊಂಡುಬಂದರು ಎಂದು ನನಗೆ ಗೊತ್ತಿರುವುದಿಲ್ಲ.

ಪಂಚರರು, ದೂರುದಾರರು ಹಾಗೂ ಇತರೆ ಸಾಕ್ಷಿದಾರರು ಒಂದೇ ಕುಟುಂಬದ ಸದಸ್ಯರು ಎಂದರೆ ಸಾಕ್ಷಿಯು ದೂರುದಾರರು ಹಾಗೂ ಸಾಕ್ಷಿದಾರರು ಒಂದೇ ಕುಟುಂಬದ ಸದಸ್ಯರಿದ್ದು, ಪಂಚರರು ಒಂದೇ ಕುಟುಂಬದ ಸದಸ್ಯರು ಇರುವುದಿಲ್ಲ ಎಂದು ನುಡಿಯುತ್ತಾರೆ.

ದೂರುದಾರರಿಗೆ ಸಿವಿಲ್ ವ್ಯಾಜ್ಯಕ್ಕೆ ಅನೂಕೂಲವಾಗಲಿ ಎಂದು ಅವರು ಸುಳ್ಳು ದೂರು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ತನಿಖೆಯನ್ನು ಮಾಡಿ ಸುಳ್ಳು ದೋಷಾರೊಪಣೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ, ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಕಚ್ಚಾ ನಕಾಶೆ ತಯಾರಿಸಿಲ್ಲ, ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬದಿಸಿದಂತೆ ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತನಿಗೂ ಹಾಗೂ ಈ ಪ್ರಕರಣಕ್ಕೊ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ತಪ್ಪಾಗದೆ ಇದ್ದರೂ ಸಹಿತ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ದೂರುದಾರರ ಮಾವ ವಯೊಸಹಜವಾಗಿ ಬಿದ್ದು ಪೆಟ್ಟು ಮಾಡಿಕೊಂಡಿದ್ದನ್ನು ದುರುಪಯೋಗಪಡಿಸಿಕೊಂಡು ಅದನ್ನು ಆರೋಪಿಯ ಮೇಲೆ ದೊಷಾರೊಪಣೆ ಹೊರಿಸಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.
ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ